- -

**ಕ್ರಿ.ಮಿಸ್ ನಂ:280/2016**
**ಪಿ.ಡಬ್ಲ್ಯೂ: 02**

**ದಿನಾಂಕ:27-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಸಿ ಕೆ ಎಸ್., ಎದುರುದಾರರ ಪರ ವಕೀಲರಿಂದ**

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ದೃಷ್ಟಿ ಚೆನ್ನಾಗಿ ಇದ್ದು, ಕಿವಿ ಸಹ ಕೇಳುತ್ತದೆ. 1 ನೇ ಅರ್ಜಿದಾರ ಮತ್ತು ಎದುರುದಾರರ ಮದುವೆ ಗೌರಿಬಿದನೂರು ತಾಲ್ಲೂಕು ವಿದುರಾಶ್ವತದಲ್ಲಿ ಜರುಗಿರುತ್ತದೆ. ಆದರೆ ಮದುವೆಯಾದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ನಾನು ಸದರಿ ಮದುವೆಗೆ ಹೋಗಿಲ್ಲ. ಮದುವೆಯಾದ ನಂತರ 1 ನೇ ಅರ್ಜಿದಾರ ಮತ್ತು ಎದುರುದಾರರು ಪರಶುರಾಂಪುರದಲ್ಲಿ ಒಂದು ತಿಂಗಳ ಮಾತ್ರ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 5-6 ವರ್ಷಗಳ ಕಾಲ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ 1 ನೇ ಅರ್ಜಿದಾರ ಮತ್ತು ಎದುರುದಾರರು ಒಂದು ತಿಂಗಳು ಮಾತ್ರ ಪರಶುರಾಂಪುರದಲ್ಲಿ ಇದ್ದು, ನಂತರ ಹಿರಿಯೂರು ತಾಲ್ಲೂಕು ಪಟ್ಟರಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಅರ್ಜಿದಾರ ಮತ್ತು ಎದುರುದಾರರು ಪಟ್ಟರಹಳ್ಳಿಯಲ್ಲಿ ವಾಸ ಮಾಡುತ್ತಿರುವ ವಿಷಯ ನನಗೆ ಗೊತ್ತಿಲ್ಲ. ಪಟ್ಟರಹಳ್ಳಿಯ ನಂತರ ಸದರಿಯವರು ಭಾಗೆಪಲ್ಲಿಯಲ್ಲಿ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಭಾಗೆಪಲ್ಲಿಯ ನಂತರ ಚಳ್ಳಕೆರೆಯಲ್ಲಿ ಬಂದು ವಾಸಿಸುತ್ತಿದ್ದರು ಎಂದರೆ ಸರಿ.

ಚಳ್ಳಕೆರೆಯ ರೈಲ್ವೆ ಗೇಟ್ ಹತ್ತಿರ 1 ನೇ ಅರ್ಜಿದಾರರು ಮತ್ತು ಎದುರುದಾರ ಒಂದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಆದರೆ ನಗರದ ನಿಖರವಾದ ಹೆಸರು ಗೊತ್ತಿಲ್ಲ. ಪರಶುರಾಂಪುರದಲ್ಲಿ ಈಗ 1 ನೇ ಅರ್ಜಿದಾರರು ವಾಸವಾಗಿರುವ ಮನೆಯ ಎದುರು ನಾನು ವಾಸವಾಗಿದ್ದೇನೆ ಎಂದರೆ ಸರಿ. ಪಟ್ಟರಹಳ್ಳಿ ಮತ್ತು ಭಾಗೆಪಲ್ಲಿಯಲ್ಲಿ ವಾಸವಿದ್ದಾಗ 1 ನೇ ಅರ್ಜಿದಾರರು ಮತ್ತು ಎದುರುದಾರರ ಸಂಸಾರದ ವಿಚಾರ ನನಗೆ ಗೊತ್ತಿಲ್ಲ.

ಚಳ್ಳಕೆರೆಯಲ್ಲಿ 1 ನೇ ಅರ್ಜಿದಾರರು ಮತ್ತು ಎದುರುದಾರರು ವಾಸವಾಗಿದ್ದ ಮನೆಯ ಹತ್ತಿರ ನಾನು ವಾಸ ಇರಲಿಲ್ಲ ಎಂದರೆ ಸರಿ. ಚಳ್ಳಕೆರೆಯಲ್ಲಿ ವಾಸವಿದ್ದಾಗ 1 ನೇ ಅರ್ಜಿದಾರರು ಮತ್ತು ಎದುರುದಾರರ ಸಂಸಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇರಲಿಲ್ಲ ಎಂದರೆ ಸರಿ.

ಎದುರುದಾರರಿಗೆ ಕುಡಿತದ ಚಟ, ಇತರೆ ಹೆಣ್ಣು ಮಕ್ಕಳ ಸಹವಾಸ ಮತ್ತು ಜೂಜಾಟ ಆಡುವ ಚಟ ಇರುವುದಾಗಿ ವಕೀಲರಿಗೆ ಹೇಳಿಸಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಎದುರುದಾರರು 1 ನೇ ಅರ್ಜಿದಾರರಿಗೆ ಕುಡಿದು ಹೊಡೆಯುವ ಬಗ್ಗೆ 1 ನೇ ಅರ್ಜಿದಾರರ ತಾಯಿ ನನಗೆ ತಿಳಿಸಿರುತ್ತಾರೆ. ಎದುರುದಾರರು 1 ನೇ ಅರ್ಜಿದಾರರಿಗೆ ಹಣವನ್ನು ತಂದು ಕೊಡಬೇಕಾಗಿ ಮತ್ತು ಇಲ್ಲವಾದಲ್ಲಿ ಎರಡನೇ ಮದುವೆ ಆಗುವುದಾಗಿ ಬೆದರಿಸುತ್ತಿದ್ದನ್ನು 1 ನೇ ಅರ್ಜಿದಾರರ ತಾಯಿ ನನಗೆ ತಿಳಿಸಿರುತ್ತಾರೆ.

ಎದುರುದಾರರು ನನಗೆ ಎಂದಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿಲ್ಲ. 1 ನೇ ಅರ್ಜಿದಾರರು ಮತ್ತು ಎದುರುದಾರರು ನಡೆದ ಗಲಾಟೆಯನ್ನು ನಾನು ಹೋಗಿ ಬಿಡಿಸಿರುವುದಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. 1 ನೇ ಅರ್ಜಿದಾರರ ಹೆಣ್ಣು ಮಕ್ಕಳ ಹೆಸರು ಭುವನ, ಕುಮುದಾ, ಮಾನಸ ಆಗಿರುತ್ತದೆ. ಎರಡನೇ ಮಗಳು ಜನಿಸಿದ ನಂತರ 1 ನೇ ಅರ್ಜಿದಾರರು ಎದುರುದಾರರ ಕುಟುಂಬದೊಂದಿಗೆ ಜಗಳ ಮಾಡಿಕೊಂಡು ತನ್ನ ತವರು ಮನೆಗೆ ಹೋದ ವಿಚಾರ ನನಗೆ ಗೊತ್ತಿದೆ. ಸದರಿ ಜಗಳ ಮಾಡಿಕೊಂಡು ಗೌರಿಬಿದನೂರು ತಾಲ್ಲೂಕಿನ ಅರಕುಂದಕ್ಕೆ ಹೋದರು. ಅರಕುಂದಲ್ಲಿ ಮೂರನೇ ಮಗಳ ಜನನದ ನಂತರ 1 ನೇ ಅರ್ಜಿದಾರರು ವಾಪಸ್ ಚಳ್ಳಕೆರೆ ಯಾವ ದಿನಾಂಕದಂದು ಮರಳಿದರು ಎಂದು ನನಗೆ ಗೊತ್ತಿಲ್ಲ. ಎದುರುದಾರರು 1 ನೇ ಅರ್ಜಿದಾರರಿಗೆ ಗಂಡು ಮಗು ಜನಿಸುವುದಿಲ್ಲ ಎಂಬ ಕಾರಣದಿಂದ 3 ನೇ ಮಗುವಿನ ಗರ್ಭದಾರಣೆ ಕಾಲದಲ್ಲಿ ಸದರಿಯವರಿಗೆ ಹೊಡೆಯುತ್ತಿದ್ದರು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಗಂಡು ಮಗು ಜನಿಸುವುದಿಲ್ಲ ಎಂಬ ಕಾರಣಕ್ಕೆ ಎದುರುದಾರರು ಬೇರೆ ಮದುವೆ ಆಗುವುದಾಗಿ ನುಡಿಯುತ್ತಿದ್ದರು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಎದುರುದಾರರು 1 ನೇ ಅರ್ಜಿದಾರರಿಗೆ ವೈದ್ಯಕೀಯ ಸೌಲಭ್ಯಗಳನ್ನು ಕೊಡಿಸುತ್ತಿರಲಿಲ್ಲ ಮತ್ತು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ವಿಚಾರದ ಬಗ್ಗೆ 1 ನೇ ಅರ್ಜಿದಾರರ ತಾಯಿ ನನಗೆ ತಿಳಿಸಿರುತ್ತಾರೆ. ಎದುರುದಾರರು 1 ನೇ ಅರ್ಜಿದಾರರಿಗೆ ವರದಕ್ಷಿಣೆ ಹಣವನ್ನು ತಂದರೆ ಮಾತ್ರ ಮನೆಗೆ ಸೇರಿಸಿಕೊಳ್ಳುವುದಾಗಿ ನುಡಿದಿದ್ದರು ಎಂದು 1 ನೇ ಅರ್ಜಿದಾರರ ತಾಯಿಯಿಂದ ನನಗೆ ತಿಳಿದಿರುತ್ತದೆ. ಎದುರುದಾರರು 1 ನೇ ಅರ್ಜಿದಾರರನ್ನು ರಾತ್ರೋರಾತ್ರಿ ನನ್ನ ಎದುರೇ ಹೊಡೆದು ಮನೆಯಿಂದ ಹೊರ ಹಾಕಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ

ಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಘಟನೆಯ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ಸದರಿ ಘಟನೆ ಪರಶುರಾಂಪುರದಲ್ಲಿ ಸುಮಾರು 15 ವರ್ಷಗಳ ಹಿಂದೆ ಜರುಗಿರುತ್ತದೆ. ಸದರಿ ಘಟನೆಯನ್ನು ಗ್ರಾಮಸ್ಥರಾದ ನಂಜುಂಡಪ್ಪರವರು ನೋಡಿರುತ್ತಾರೆ ಆದರೆ ಅವರು ಪೌತಿಯಾಗಿರುತ್ತಾರೆ. ಚನ್ನಬಸಪ್ಪರವರು, ದುರ್ಗಪ್ಪರವರು ಘಟನೆಯನ್ನು ಕಣ್ಣಾರೆ ನೋಡಿರುತ್ತಾರೆ. ಸದರಿ ಘಟನೆಯ ಬಗ್ಗೆ ವಿಕ್ಷೀಸಿದವರಾದ ನಾವು ಪೊಲೀಸರಿಗೆ ಪಿರ್ಯಾದನ್ನು ನೀಡಿಲ್ಲ. ಎದುರುದಾರರು ಹೊರ ಹಾಕಿದ ನಂತರ 1ನೇ ಅರ್ಜಿದಾರರು ನಮ್ಮ ಮನೆಯ ಪಕ್ಕದಲ್ಲಿರುವ ನನಗೆ ಸೇರಿದ ಶೆಡ್ ನಲ್ಲಿದ್ದರು. ಸದರಿ ಎಲ್ಲಾ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆಯಾದ ನಂತರ ಎದುರುದಾರರು ಮತ್ತು ಅರ್ಜಿದಾರರ ಕುಟುಂಬಸ್ಥರನ್ನು ಸೇರಿಸಿ ಯಾವುದೇ ಪಂಚಾತಿಯಿಯನ್ನು ನಡೆಸಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಕೊನೆಯ 3 ಖಂಡಿಕೆಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಸದರಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬಸ್ ನಿಲ್ದಾಣದಲ್ಲಿ ಬರೆಸಿರುತ್ತೇನೆ. ಸಾಕ್ಷಿಗೆ ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಬರೆದಿರುವುದನ್ನು ಓದುವಿರಾ ಎಂದರೆ ಸಾಕ್ಷಿಯು ಸಣ್ಣ ಅಕ್ಕರ ಇರುವುದರಿಂದ ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಚಷಮಾ ಹಾಕುವ ಅಭ್ಯಾಸ ಇಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಸಹಿ ಹಾಕುವ ಮುಂಚೆ ನಾನು ಓದಿರುತ್ತೇನೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 2ನೇ ಪುಟದ ಕೆಳಗಿನಿಂದ 3ನೇ ಖಂಡಿಕೆಯಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಎದುರುದಾರ ಚೀಪ್ಸ್ ನ್ನು ಬೇಕರಿಗಳಿಗೆ ವಿತರಿಸುತ್ತಾನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಎದುರುದಾರರ ಬೇಕರಿಯ ಮಾಲೀಕ ಎಂದು ಬರೆಸಿರುತ್ತೇನೆ. ಬೇಕರಿಯ ಹೆಸರು ನನಗೆ ತಿಳಿದಿಲ್ಲ. ಆದರೆ ಅದು ಪರಶುರಾಂಪುರದಲ್ಲಿ ಇರುತ್ತದೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರಿಗೆ ಆದಾಯ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ವಾರ್ಷಿಕವಾಗಲೀ ಅಥವಾ ತಿಂಗಳಿಗಾಗಲೀ ಎದುರುದಾರರಿಗೆ ಬರುವ ಆದಾಯವನ್ನು ಹೇಳಲಾರೆ. ಎದುರುದಾರರಿಗೆ ಇರುವ ಸ್ಥಿರ ಆಸ್ತಿಗಳು ಎಂದರೆ ಪರಶುರಾಂಪುರದಲ್ಲಿ 2 ವರೆ ಎಕರೆ ನೀರಾವರಿ ಜಮೀನು ಆದರೆ ಸರ್ವೇ ನಂಬರ ನನಗೆ ಗೊತ್ತಿಲ್ಲ ಮತ್ತು ಪರಶುರಾಂಪುರದಲ್ಲಿ ಸದರಿಯವರ ಹೆಸರಿಗೆ ಎರಡು ಮನೆಗಳು ಇರುತ್ತವೆ. ಸದರಿ ಸ್ಥಿರಾಸ್ತಿಗಳ ಸಂಬಂಧ ನಾನು

ದಾಖಲೆಗಳನ್ನು ನೋಡಿಲ್ಲ. ಸದರಿ ಜಮೀನು ಮತ್ತು ಮನೆಯಿಂದ ಎದುರುದಾರರಿಗೆ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನೀವು ಈ ಮೇಲೆ ಹೇಳಿದ ಪರಶುರಾಂಪುರದಲ್ಲಿರುವ ಎರಡು ಮನೆಗಳು ಎದುರುದಾರರ ತಾಯಿಯವರಾದ ಪುಷ್ಪಮ್ಮರವರ ಹೆಸರಿನಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮನೆಯ ಎದುರಿನಲ್ಲೆ ಪುಷ್ಪಮ್ಮರವರ ಸದರಿ ಎರಡು ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಎರಡು ಮನೆಗಳಲ್ಲಿ ಒಂದು ಮನೆಯನ್ನು ಪುಷ್ಪಮ್ಮರವರು ವಾಹನ ಚಾಲಕರಾದ ರಮೇಶ ಎಂಬುವರಿಗೆ ಬಾಡಿಗೆ ನೀಡಿರುತ್ತಾರೆ ಎಂದರೆ ಸರಿ. ಈಗ್ಗೆ ಒಂದು ವರೆ ವರ್ಷಗಳ ಒಳಗೆ ಸದರಿ ರಮೇಶರವರು ಇದ್ದಂತಹ ಮನೆಗೆ 1 ನೇ ಅರ್ಜಿದಾರರು ದೌರ್ಜನ್ಯದಿಂದ ನುಗ್ಗಿರುತ್ತಾರೆ ಮತ್ತು ನಾನು ಸದರಿಯವರಿಗೆ ಸಹಾಯ ಮಾಡಿರುತ್ತೇನೆ ಎಂದರೆ ಸರಿ. 1 ನೇ ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.